ಇ) ಇದರಿಂದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ರೈತರ ನೀರಾವರಿಗೆ ಹಾಗೂ ಗ್ರಾಮೀಣ ಪ್ರದೇಶದ ರೈತರಿಗೆ ವಾರ್ತೆ ಸಮಾಚಾರಗಳಿಂದ ವಂಚಿತರಾಗುವುದು ನಿಜವಲ್ಲವೇ;

ಈ) ಬೇರೆ ಭಾಗದಲ್ಲಿ ಈ ಪ್ರಕಾರ ಆರು ಘಂಟೆ ವಿದ್ಯುಚ್ಛಕ್ತಿ ಕಡಿತವಾಗದಿರುವುದು ನಿಜವೇ

ಉ) ಗಡಿ ಪ್ರಾಂತ್ಯದ ನಾಗರೀಕರಿಗೆ, ವಿದ್ಯಾರ್ಥಿಗಳಿಗೆ ತೊಂದರೆ ಕೊಡುವುದನ್ನು ತಪ್ಪಿಸಲು ಮಧ್ಯಾಹ್ನದ ವೇಳೆಯಲ್ಲಿ 1-2 ಘಂಟೆಗಳು ಮಾತ್ರ ವಿದ್ಯುಚ್ಛಕ್ತಿ ಕಡಿಮೆ ಮಾಡಿ ಅನುಕೂಲ ಮಾಡಿಕೊಡಬಹುದೇ

ಶ್ರೀ ಕೆ.ಎ. ನಿಸಾರ್ ಅಹಮದ್ (ಇಂಧನ ರಾಜ್ಯ ಸಚಿವರು): ಅ) ಗುರುಮಿಠಕಲ್ನಲ್ಲಿರುವ 33:11 ಕೆ.ವಿ. ಪವರ್ ಸಬ್ಸ್ಟೇಷನ್ನಿಗೆ ಷಹಪುರದಲ್ಲಿರುವ 110:33ಕೆ.ವಿ. ಪವರ್ ಸಬ್ಸ್ಟೇಷನ್ನಿಂದ ವಿದ್ಯುತ್ ಸರಬರಾಜಾಗುತ್ತಿದೆ. ಷಹಪುರ ಈ ಪವರ್ ಸಬ್ಸ್ಟೇಷನ್ ಓವರ್ಲೋಡ್ ಆಗುತ್ತಿರುವುದರಿಂದ, ಇದರ ನಿವಾರಣೆಗಾಗಿ ಗುರುಮಿಠಕಲ್, ಕೊಂಕಲ್, ಯಾದಗಿರಿಗಳಲ್ಲಿರುವ 33:11 ಕೆ.ವಿ. ಪವರ್ ಸಬ್ ಸ್ಟೇಷನ್ಗಳಲ್ಲಿ ಬೆಳಿಗ್ಗೆ ಮತ್ತು ಸಂಜೆ ವೇಳೆಗಳಲ್ಲಿ ನಿಯಮಿತ ಲೋಡ್ ಷೆಡ್ಡಿಂಗ್ನ್ನು ಜಾರಿಗೊಳಿಸಲಾಗಿದೆ. ಈ ರೀತಿಯ ಲೋಡ್ ಷೆಡ್ಡಿಂಗ್ನ್ನು ಜಾರಿಗೊಳಿಸಲು ಇದ್ದಲ್ಲಿ ಷಹಪುರದ 110:33ಕೆ.ವಿ. ಪವರ್ ಸಬ್ ಸ್ಟೇಷನ್ನಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹೆಚ್ಚಿನ ಮೌಲ್ಯದ 10 ಎಂವಿಎ ಸಾಮರ್ಥ್ಯದ ಪವರ್ ಟ್ರಾನ್ಸ್ಫಾರ್ಮರ್ಗೆ ಧಕ್ಕೆ ಉಂಟಾಗುವ ಸಂಭವವಿದೆ. ಆ ರೀತಿ ಧಕ್ಕೆ ಉಂಟಾದಲ್ಲಿ ವಿದ್ಯುತ್ ಸರಬರಾಜು ಸಂಪೂರ್ಣವಾಗಿ ಅಸ್ತವ್ಯಸ್ತಗೊಳ್ಳುವುದು.

ಆ) ಮತ್ತು ಇ) ಅನಿವಾರ್ಯ ಪರಿಸ್ಥಿತಿಯಿಂದಾಗಿ ಈ ರೀತಿಯ ಲೋಡ್ ಶೆಡ್ಡಿಂಗ್ನ್ನು ನಿರ್ವಹಿಸಲಾಗುತ್ತಿದೆ. ಷಹಾಪುರದ 110:33 ಕೆ.ವಿ. ಪವರ್ ಸಬ್ ಸ್ಟೇಷನ್ನಿನ ಓವರ್ಲೋಡ್ ಆಗುವಿಕೆಯನ್ನು ತಪ್ಪಿಸಲು ಇನ್ನೊಂದು 10 ಎಂ.ವಿ.ಎ. ಸಾಮರ್ಥ್ಯದ 110:33 ಕೆ.ವಿ. ಪವರ್ ಟ್ರಾನ್ಸ್ಫಾರ್ಮರ್ನ್ನು ಷಹಾಪುರದ 110:33 ಕೆ.ವಿ. ಪವರ್ ಸಬ್ಸ್ಟೇಷನ್ನಿನಲ್ಲಿ ಸ್ಥಾಪಿಸಲು ಈಗಾಗಲೇ ಕ್ರಮ ಕೈಗೊಂಡಿದ್ದು, ಆದಷ್ಟು ಶೀಘ್ರಗತಿಯಲ್ಲಿ ಈ ಕಾರ್ಯವನ್ನು ಪೂರ್ಣಗೊಳಿಸಲಾಗುವುದು. ಅಲ್ಲಿಯವರೆಗೆ ಸಾರ್ವಜನಿಕರು ಮಂಡಳಿಯೊಡನೆ ಸಹಕರಿಸಬೇಕಾಗಿದೆ.

ಈ) ನಿಜವಲ್ಲ, ಗುರುಮಿಠಕಲ್ನಲ್ಲಿರುವ 33:11 ಕೆ.ವಿ. ಪವರ್ ಸಬ್ ಸ್ಟೇಷನ್ ಅಲ್ಲದೇ ಕೊಂಕಲ್, ಯಾದಗೀರ್, ಮತ್ತು ಶೋರಾಪುರಗಳಲ್ಲಿರುವ 33:11 ಕೆ.ವಿ. ಪವರ್ ಸಬ್ಸ್ಟೇಷನ್ಗಳಲ್ಲಿ ನಿಯಮಿತ ಲೋಡ್ ಷೆಡ್ಡಿಂಗ್ನ್ನು ನಿರ್ವಹಿಸಲಾಗುತ್ತಿದೆ.

ಉ) ಪ್ರಶ್ನೆಯ 'ಅ' ಭಾಗಕ್ಕೆ ನೀಡಿರುವ ಉತ್ತರದಲ್ಲಿ ತಿಳಿಸಿರುವಂತೆ ಸದ್ಯದ ಅನಿವಾರ್ಯ ಪರಿಸ್ಥಿತಿಯಲ್ಲಿ ಇದನ್ನು ಈಡೇರಿಸುವುದು ಕಷ್ಟಕರವಾಗಿದೆ. ಷಹಾಪುರದ 110:33 ಕೆ.ವಿ. ಪವರ್ ಸಬ್ಸ್ಟೇಷನ್ನಿನಲ್ಲಿ ಇನ್ನೊಂದು 10 ಎಂ.ವಿ.ಎ. ಸಾಮರ್ಥ್ಯದ 110:33 ಕೆ.ವಿ. ಪವರ್ ಟ್ರಾನ್ಸ್ಫಾರ್ಮರನ್ನು ಆದಷ್ಟು ಶೀಘ್ರಗತಿಯಲ್ಲಿ ಸ್ಥಾಪಿಸಿ, ಗಡಿ ಪ್ರಾಂತ್ಯದ ನಾಗರೀಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಲಾಗುವುದು.

ಕಾಗಿನಾ ನದಿಯ ಮೇಲೆ ನಿರ್ಮಾಣವಾಗುವ ಕೆರೆಯ ಆಯಕಟ್ಟಿನ ಬಗ್ಗೆ

734 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ): ಮಾನ್ಯ ಉಪಮುಖ್ಯಮಂತ್ರಿಗಳು [illegible] ಉತ್ತರಿಸುವರೆ?

ಅ) *ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಕಾಗಿನಾ ನದಿಯ ಮೇಲೆ ನಿರ್ಮಾಣವಾಗುವ ಕೆರೆಯ ಆಯಕಟ್ಟಿನಲ್ಲಿ ಎಡಗಾ ಗ್ರಾಮದ ಭೂಮಿ ಯೋಜನೆಯ ನಕಾಶೆಯಂತೆ ಮುಳುಗಡೆಯಾಗದಿದ್ದರೆ ಸಹ ಎಡಗಾ ಗ್ರಾಮ ಸಮೀಪ ಏತ ನೀರಾವರಿ ಯೋಜನೆ ಮಂಜೂರಿಯಾಗಿದ್ದು ಕೈಬಿಡಲು ಕಾರಣವೇನು?*

ಆ) *ಈಗಲಾದರೂ 1994-95ನೇ ಸಾಲಿನಲ್ಲಿ ಈ ಏತ ನೀರಾವರಿ ಯೋಜನೆಯನ್ನು ಎಡಗಾ ಗ್ರಾಮ ಸಮೀಪ ನಿರ್ಮಾಣ ಮಾಡಿ ಬಡ ರೈತರಿಗೆ ನೀರಾವರಿಗಾಗಿ ಅನುಕೂಲ ಮಾಡಿಕೊಡಲಾಗುವುದೇ?*

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಎಡಗಾ ಗ್ರಾಮದ ಸಮೀಪ ಏತ ನೀರಾವರಿ ಯೋಜನೆ ಮಂಜೂರಾಗಿಲ್ಲದ ಕಾರಣ ಸದರಿ ಏತ ನೀರಾವರಿ ಯೋಜನೆಯನ್ನು ತೆಗೆದುಕೊಳ್ಳುವ ಅಥವಾ ಕೈಬಿಡುವ ಪ್ರಮೇಯವೇ ಇಲ್ಲ.

ಆ) (ಅ) ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿನ ರಸ್ತೆಗಳ ನಿರ್ಮಾಣ ಕುರಿತು

649 - ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ರಸ್ತೆಗಳ ನಿರ್ಮಾಣ ಮಾಡುತ್ತಿರುವ (ಥಿಕನೆಸ್) ಪದ್ಧತಿ ಯಾವುದು.*

ಆ) *ಹೈದರಾಬಾದ್ ಅಭಿವೃದ್ಧಿ ಪ್ರಾಧಿಕಾರ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಎಷ್ಟು ಕಿ.ಮೀ ರಸ್ತೆ ತಯಾರು ಮಾಡಲಾಗಿದೆ ಹಾಗೂ ಅದಕ್ಕೆ ತಗುಲಿದ ಖರ್ಚು ಎಷ್ಟು.*

ಇ) *ಮಲೆನಾಡು ಅಭಿವೃದ್ಧಿ ರಸ್ತೆಗಳ ನಿರ್ಮಾಣದಲ್ಲಿ ಯಾವ ಪದ್ಧತಿಯನ್ನು ಅನುಸರಿಸಲಾಗುತ್ತಿದೆ?*

ಈ) *ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಪ್ರಾಧೀಕಾರವು ಅನುಸರಿಸುತ್ತಿರುವ ಪದ್ಧತಿಯನ್ನು ಮಲೆನಾಡು ಅಭಿವೃದ್ಧಿ ಕೆಲಸಕ್ಕೆ ಯಾಕೆ ಅನುಸರಿಸುತ್ತಿಲ್ಲ?*

ಉ) *ಈ ಎರಡೂ ಮಂಡಳಿಗಳಲ್ಲಿ ಆ ಕೆಲಸಗಳ ಹಿನ್ನೆಲೆಯಲ್ಲಿ ಗುತ್ತಿಗೆದಾರರಿಗೆ ಕೊಡಬೇಕಾಗಿರುವ ಹಣವೆಷ್ಟು?*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯ ಉನ್ನತ ಮಟ್ಟದ ಸಮಿತಿಯಿಂದ ಅನುಮೋದನೆಗೊಂಡ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಯೋಜನೆಯಡಿಯಲ್ಲಿ ರಸ್ತೆಗಳ ಸುಧಾರಣೆ ಕೆಲಸಗಳಿಗಾಗಿ ರಸ್ತೆಯ ವರ್ಗ ಪರಿಗಣಿಸಿ ಹಾಗೂ ಮೊದಲು ಇದ್ದ ರಸ್ತೆಯ ಸ್ಥಿತಿಗತಿಗಳ ಸರ್ವೇ ಮಾಡಿ ಪ್ರಾಯೋಗಿಕ ಪರೀಕ್ಷೆಗಳ ಮೂಲಕ ಹಾಗೂ ವಾಹನ ಸಾಂದ್ರತೆಯನ್ನು ಅನುಲಕ್ಷಿಸಿ, (ಸಿಬಿಆರ್ ಮೌಲ್ಯಕ್ಕನುಗುಣವಾಗಿ) ರಸ್ತೆಯನ್ನು ಸದೃಢವಾಗಿ ನಿರ್ಮಿಸಲು ಬೇಕಾಗುವ ವಿವಿಧ ರಸ್ತೆಗಳ ದಪ್ಪವನ್ನು ಅಂದಾಜು ಪತ್ರಿಕೆಯಲ್ಲಿ ಅಳವಡಿಸಿ ರಸ್ತೆಗಳನ್ನು ನಿರ್ಮಾಣ ಮಾಡುವ ಪದ್ಧತಿಯನ್ನು ಅನುಸರಿಸಲಾಗಿದೆ.